

# ಕರ್ನಾಟಕ ರಾಜ್ಯ ನದಾಫ/ಪಿಂಜಾರ ಸಂಘ(ರಿ)


ರಿ.ನಂ. 151/ಎಸ್.ಓ.ಆರ್ / ಎಸ್.ಎಮ್.ಜಿ. 1993-94

ನೋಂದಣಿ ಕಛೇರಿ : ನಂ. 65, ಕೋಟೆ ಪೋಸ್ಟ್ ಆಫೀಸ್ ರಸ್ತೆ, ಶಿವಮೊಗ್ಗ - 577202

ದಿ. ಹಾಜಿ. ಹೆಚ್. ಇಬ್ರಾಹಿಂ
ಸಂಸ್ಥಾಪಕ ಅಧ್ಯಕ್ಷರು

ಆಡಳಿತ ಕಛೇರಿ : ವಿಶ್ವಮಾನವ ಸಾಂಸ್ಕೃತಿಕ ಮತ್ತು ವಿದ್ಯಾಸಂಸ್ಥೆಯ ಆವರಣ
ಸೀಬಾರ-ಗುತ್ತಿನಾಡು. ಐನಳ್ಳಿ ಅಂಚೆ, ಚಿತ್ರದುರ್ಗ.577502 Email : krnpshj@gmail.com

| ಹೆಚ್. ಜಲೀಲ್ ಸಾಬ್ | ಜಿ. ಡಿ. ನದಾಫ್ | ಎಂ. ಜೆ. ನದಾಫ್ | ರಿಯಾಜ್ ಸಲೀಮ್ ನಾಗ್ತೆ |
|---|---|---|---|
| ರಾಜ್ಯಾಧ್ಯಕ್ಷರು | ರಾಜ್ಯ ಉಪಾಧ್ಯಕ್ಷರು | ರಾಜ್ಯ ಉಪಾಧ್ಯಕ್ಷರು | ಪ್ರಧಾನ ಕಾರ್ಯದರ್ಶಿ |
| 9902670703 | 9448124777 | 9448406707 | 9986431734 |

ಸಹ ಕಾರ್ಯದರ್ಶಿ:
ಶಹಬುದ್ದೀನ್ ಸಾಬ್. ಡಿ. ನೂರಭಾಷ
9620071066
ರಾಜ್ಯ ಖಜಾಂಚಿ
ಪಿ. ಚಂದಾಸಾಹೇಬು,
9916158313
ಸಂಘಟನಾ ಕಾರ್ಯದರ್ಶಿಗಳು:
ಶ್ರೀಮತಿ ಡಾ|| ಚಮನ ಫರ್ಜಾನ
9926899910
ಶಾಹುಬುದ್ದೀನ್ ಟೋಪಿವಾಲೆ
9448629696
ವಿಭಾಗೀಯ ಉಪಾಧ್ಯಕ್ಷರು :
ಮಹಮ್ಮದ್ ಇಸ್ಮಾಯಿಲ್
ಗುಲ್ಬರ್ಗಾ ವಿಭಾಗ
9972561600
ಮುದಸ್ಸರ ಹಾರೂನ
ಬೆಳಗಾವಿ ವಿಭಾಗ
9972396508
ಪಿ. ಇಮಾಮ್ ಸಾಬ್
ಗದಗ ವಿಭಾಗ
9480152886
ಎಂ. ಇಬ್ರಾಹಿಂ
ಬಳ್ಳಾರಿ ವಿಭಾಗ
9886296786
ಪ್ರೋ || ಸನಾವುಲ್ಲಾ. ಪಿ. ಎಫ್.
ಬೆಂಗಳೂರು ವಿಭಾಗ 1
9448220703
ವೈ. ಸಿ. ಮಸ್ತಾನವಲಿ
ಬೆಂಗಳೂರು ವಿಭಾಗ 2
8310768600
ಡಿ. ಬಿ. ಹಸನ್ ಪೀರ್
ದಾವಣಗೆರೆ ವಿಭಾಗ
9880077044


ಪತ್ರದ ಸಂಖ್ಯೆ :ಕ.ರಾ.ನ.ಪಿ.ಸಂ/ಪೂ.ಪ್ರ.ಜ.ಸ.ಮಾ.ಪ್ರಗೌ.ಕು/103/ 2021-22 ದಿನಾಂಕ :- 29-10-2021.

ಗೆ,

ರಾಜ್ಯದ ಎಲ್ಲಾ ತಾಲ್ಲೂಕು ಘಟಗಳ ಅಧ್ಯಕ್ಷರುಗಳಿಗೆ,
(ಜಿಲ್ಲಾ ಘಟಕದ ಮೂಲಕ)

ಮಾನ್ಯರೆ,

**ವಿಷಯ: ಪೂರ್ಣ ಪ್ರಮಾಣದ ಜನಗಣತಿ ಮತ್ತು ಸದಸ್ಯತ್ವ ಮಾಡುವವರಿಗೆ ಪ್ರಶಸ್ತಿ ಮತ್ತು ಗೌರವ ಕುರಿತು .**

ರಾಜ್ಯದ ಎಲ್ಲಾ ತಾಲೂಕು ಘಟಕದ ಗೌರವಾನ್ವಿತ ಅಧ್ಯಕ್ಷರುಗಳೇ ಮತ್ತು ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳೇ ತಮ್ಮೆಲ್ಲರಿಗೂ ತಿಳಿದಂತೆ ಅಕ್ಟೋಬರ್ 21 ರಂದು ನಮ್ಮ ಸಂಘವು ಅಸ್ತಿತ್ವಕ್ಕೆ ಬಂದ ದಿನವಾಗಿರುತ್ತದೆ . ಕಾರಣಾಂತರಗಳಿಂದ ಇದುವರೆಗೂ ಸಂಘದ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲು ಸಾಧ್ಯವಾಗಿರಲಿಲ್ಲ. 2021 ನೇ ವರ್ಷದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಅನ್ನಸಂತರ್ಪಣೆಯನ್ನು ದಿನಾಂಕ 21-10- 2021 ರಂದು ನೆರವೇರಿಸುವ ಮೂಲಕ ಈ ವರ್ಷದಿಂದ ಚಾಲನೆ ನೀಡಲಾಗಿದೆ .

ದಿನಾಂಕ:24-10-2021 ರಂದು ರಾಯಚೂರು ಜಿಲ್ಲೆ ಮಾನ್ವಿಯಲ್ಲಿ ನೆರವೇರಿದ ಸರ್ವಸಾಧಾರಣ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಇನ್ನು ಮುಂದೆ ಪ್ರತಿವರ್ಷ ಸಂಘದ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸುವುದುಲ್ಲದೆ ನಮ್ಮ ಜನಾಂಗದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಸೇವೆ, ಸಲ್ಲಿಸಿದ ಗಣ್ಯರಿಗೆ ಸನ್ಮಾನ ಮತ್ತು ಗೌರವ ಸಲ್ಲಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

ದಿನಾಂಕ:21-10-2021 ರಿಂದ ಜಾರಿಗೆ ಬರುವಂತೆ ನಮ್ಮ ಸಂಘದಿಂದ **"ಸದಸ್ಯತ್ವದ ಆಂದೋಲನ"**ವನ್ನು ಹಮ್ಮಿಕೊಂಡಿರುವ ಬಗ್ಗೆ ತಮ್ಮೆಲ್ಲರಿಗೂ ತಿಳಿದಿರುವ ಸಂಗತಿ. ಈ ಕಾರ್ಯಕ್ರಮದಲ್ಲಿ ಎಲ್ಲರೂ ಕಡ್ಡಾಯವಾಗಿ ಭಾಗವಹಿಸಿ ಮಾರ್ಚ್ 2022 ರ ಅಂತ್ಯದೊಳಗಾಗಿ ತಾಲ್ಲೂಕು ಹಂತದಲ್ಲಿ ಇರಬಹುದಾದ ನಮ್ಮ ಜನಾಂಗದವರ ಜನಗಣತಿ ಮತ್ತು ಎಲ್ಲರನ್ನೂ ಸದಸ್ಯರನ್ನಾಗಿ ಮಾಡುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಲಾಗಿದೆ .

ಯಾವ ತಾಲೂಕು ಘಟಕದವರು **"ನದಾಫ್/ಪಿಂಜಾರ್ ಮಿತ್ರ"** ರನ್ನು ನೇಮಿಸಿಕೊಳ್ಳದೆ ಪೂರ್ಣ ಪ್ರಮಾಣದ ಜನಗಣತಿ ಮತ್ತು ಸದಸ್ಯತ್ವದ ಕಾರ್ಯ ಯಶಸ್ವಿ ಸಾಧನೆ ಮಾಡುವರೋ ಅಂತಹ ಘಟಕದವರನ್ನು ಗುರುತಿಸಿ ದಿನಾಂಕ : 21-10-2022 ರಂದು ನೆರವೇರಿಸುವ ಸಂಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ **"ಸಂಘಟನಾ ಚಕ್ರವರ್ತಿ"** ಎಂಬ ಬಿರುದು ನೀಡುವ ಜೊತೆಗೆ ಪ್ರಶಸ್ತಿ ಪತ್ರ ಮತ್ತು ಸನ್ಮಾನದ ಗೌರವ ನೀಡುಲಾಗುವುದು. ಅದೇ ರೀತಿ ಯಾವ ತಾಲೂಕು ಘಟಕದವರು ನದಾಫ್ ಪಿಂಜಾರ್ ಮಿತ್ರರನ್ನು ನೇಮಿಸಿಕೊಳ್ಳದೆ ರಾಜ್ಯದಲ್ಲಿ ಅತಿ ಹೆಚ್ಚು ಸದಸ್ಯರನ್ನು ಮಾಡುವ ತಾಲ್ಲೂಕು ಘಟಕದವರನ್ನು ಗುರುತಿಸಿ **"ಸಂಘಟನಾ ಚತುರ"** ಎಂಬ ಬಿರುದನ್ನು ನೀಡುವ ಜೊತೆಗೆ ಪ್ರಶಸ್ತಿಪತ್ರ ಸನ್ಮಾನದ ಗೌರವ ನೀಡಲಾಗುವುದು. ಈ ರೀತಿಯ ರಾಜ್ಯಮಟ್ಟದ ಗೌರವಕ್ಕೆ ಪಾತ್ರರಾಗುಲು ಎಲ್ಲರೂ ಸ್ಪರ್ಧಾತ್ಮಕವಾಗಿ ಭಾಗವಹಿಸಿ ಸಮಾಜದ ಕಣ್ಮಣಿಗಳಾಗುತ್ತೀರೆಂದು ಈ ಮೂಲಕ ತಮ್ಮೆಲ್ಲರಿಗೂ ತಿಳಿಸಲಾಗಿದೆ.

ಮುಂದುವರೆದು ಎಲ್ಲರಲ್ಲಿ ಕೋರುವುದೇನೆಂದರೆ ಪರತಿ ವರ್ಷ ಸಂಘದಿಂದ ಕ್ಯಾಲೆಂಡರನ್ನು ಮುದ್ರಿಸುತ್ತಿದ್ದು, ಅದಕ್ಕೆ ಯಾವ ಜಿಲ್ಲೆಯಿಂದ ಎಲ್ಲಾ ತಾಲ್ಲೂಕುಗಳಿಂದ ಕನಿಷ್ಠ 5 (ಐದು) **"ಜಾಹಿರಾತು"**ಗಳು ಬರುವಂತೆ ಕಾರ್ಯಪ್ರವೃತ್ತರಾಗುವ ಜಿಲ್ಲಾ ಘಟಕ ಮತ್ತು ವಿಭಾಗೀಯ ಉಪಾಧ್ಯಕ್ಷರುಗಳಿಗೆ (ಆ ವಿಭಾಗದದ ಎಲ್ಲಾ ಜಿಲ್ಲೆಗಳಲ್ಲಿ ಗುರಿ ತಲುಪಿದಲ್ಲಿ) ಸಂಸ್ಥಾಪನಾ ದಿನಾಚರಣೆಯಂದು ಸನ್ಮಾನ ಮಾಡಲಾಗುವುದು.

ಕ್ಯಾಲೆಂಡರ್ **ಜಾಹಿರಾತು**ಗಳನ್ನು ಹಾಗೂ ಹಣವನ್ನು ದಿನಾಂಕ:15-11-2021 ರ ಒಳಗಾಗಿ ರಾಜ್ಯಘಟಕಕ್ಕೆ ಕಳುಹಿಸಲು ವಿನಂತಿಸಲಾಗಿದೆ. ಆ ವೇಳೆಗೆ ತಲುಪುವ ವ್ಯವಸ್ಥೆ ಮಾಡುವುದು ಜಿಲ್ಲಾ ಘಟಕದ ಅಧ್ಯಕ್ಷರುಗಳು ಮತ್ತು ವಿಭಾಗೀಯ ಉಪಾಧ್ಯಕ್ಷರುಗಳ ಜವಾಬ್ದಾರಿ ಆಗಿರುತ್ತದೆ. ಈ ಕೆಲಸವು ತ್ವರಿತವಾಗಲು ಕೋರಲಾಗಿದೆ.

ತಮ್ಮ ವಿಶ್ವಾಸಿ

(ಅಧ್ಯಕ್ಷರ ಅನುಮೋದನೆ ಮೇರೆಗೆ)

ಪ್ರಧಾನ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ನದಾಫ್/ಪಿಂಜಾರ ಸಂಘ.

ಪ್ರತಿಯನ್ನು :

1) ರಾಜ್ಯ ಘಟಕದ ಎಲ್ಲಾ ಪದಾಧಿಕಾರಿಗಳಿಗೆ ಮಾಹಿತಿಗಾಗಿ
2) ರಾಜ್ಯದ ಎಲ್ಲಾ ಜಿಲ್ಲಾ ಘಟಕದ ಅಧ್ಯಕ್ಷರುಗಳಿಗೆ ಮಾಹಿತಿಗಾಗಿ .